ಕೇಳಿಸಿಕೊಳ್ಳುತ್ತಿರುವ ಭಾವದಲ್ಲಿ ಬಿದ್ದುಕೊಂಡಿದ್ದ ತೊರದನಿಗೆ ಅದು ನಿದ್ದೆಯೋ ಎಚ್ಚರವೋ ಅನ್ನುವ ಗೊಂದಲ. ರಾತ್ರಿ ಎಷ್ಟೋ ಹೊತ್ತಿನಲ್ಲಿ ಯಾರೋ ಪಕ್ಕದಲ್ಲಿ ಕುಳಿತು ತಲೆ ಕೂದಲಿನಲ್ಲಿ ಬೆರಳಾಡಿಸಿದಂತೆ... ಎದೆಯಮೇಲೆ ಅಂಗೈಯಿಟ್ಟಂತೆ... ನೋವಿನಲ್ಲಿ ನಿಡಿದಾಗಿ ಉಸಿರು ಬಿಟ್ಟಂತೆ. ಕನಸೋ ಕಲ್ಪನೆಯೋ ಅನ್ನುವಂತಹ ಅಸ್ಪಷ್ಟತೆ ಬೆಳಗಾದಮೇಲೂ ಉಳಿಯಿತು.

'ಪರೀಕ್ಷೆ ಹತ್ರ ಬಂದೇಹೋತು! ಯಾಕೋ ಈ ಕಾಲಮ್‌ಗಳು ಓವರ್ಲ್ಯಾಪ್ ಆಗ್ತವೆ. ಸ್ವಲ್ಪ ನೋಡೋ...' ಎಂದು ಮಂದಾ ಲ್ಯಾಪ್‌ಟಾಪಿನಲ್ಲಿ ಏನೋ ಮಾಡುತ್ತಿದ್ದವಳು ಅದನ್ನು ಇವನತ್ತ ಸರಿಸಿ ಎದ್ದಳು. ಸರಿಪಡಿಸಿ ಅತ್ತ ನೋಡಿದಾಗ ಬ್ಯಾಗಿನಲ್ಲಿ ಏನೋ ಗಾಬರಿಯಲ್ಲಿ ಹುಡುಕುತ್ತಿದ್ದುದು ಕಾಣಿಸಿತು. ಮೊಳಕಾಲ ಮೇಲೆ ನಿಂತು ಬ್ಯಾಗಿಂದ ಪುಸ್ತಕ ಪೇಪರು ಹೊರಹಾಕುತ್ತ ತಡಕಾಡುವುದರಲ್ಲಿ ತಲ್ಲೀನಳಾಗಿದ್ದಳು. 'ಬಸ್ಪಾಸು ಸಿಗತಾ ಇಲ್ವಲ್ಲೋ! ನಿನ್ನೆ ಆ ಕಂಡಕ್ಟರ ಕಾಡಿಸಿದ್ದು ನೋಡಿದೀಯಲ್ಲ...' ಎಂದು ಹುಡುಕುತ್ತಲೇ ಗೊಣಗುತ್ತಿದ್ದವಳನ್ನು ನೋಡುತ್ತಲೇ ಇರಬೇಕೆನ್ನಿಸಿತು. ಬೆನ್ನಮೇಲೆಲ್ಲ ಹರಡಿದ ಕಪ್ಪು ಕೂದಲು, ಗೋಧಿಬಣ್ಣದ ಮುಖದಲ್ಲಿ ಮಾವನಿಂದ ಬಂದ ನೇರವಾದ ಮೂಗು, ಅದಕ್ಕೆ ಬಂಗಾರದ ಬುಲಾಕು. ಅದರಡಿಯಲ್ಲಿ ತುಸುವೇ ಅರಳಿಕೊಂಡ ತುಟಿ. ಕೆಳಗೆ ಉರುಟಾದ ಗದ್ದ. ತನಗಿಂತ ಆರುತಿಂಗಳಿಗೆ ದೊಡ್ಡವಳು. ಇಬ್ಬರನ್ನೂ ಒಂದೇ ಕ್ಲಾಸಿಗೆ ಸೇರಿಸಿದ್ದರು. ಆಗಲೇ ಮೇಲಿನ ಕ್ಲಾಸುಗಳಲ್ಲಿದ್ದ ಅಮರೇಶ ಮತ್ತು ರಾಜೇಂದ್ರ ತಮ್ಮನ್ನು ಹತ್ತಿರಕ್ಕೆ ಸೇರಿಸುತ್ತಿರಲಿಲ್ಲ. ಒಂದನೇ ಕ್ಲಾಸಿಂದ ಜೊತೆಯಲ್ಲಿ ಶಾಲೆಗೆ ಹೋಗಿ ಜೊತೆಯಲ್ಲೇ ಬರುತ್ತಿದ್ದರು. ಒಳದಾರಿಯಲ್ಲಿ ಆಡಿಕೊಳ್ಳುತ್ತಾ ಬರುವಾಗ ಮರದಡಿ ಬಿದ್ದ ಮಾವಿನಕಾಯಿ ಹೆಕ್ಕುವುದು, ಅರಳಿಮರದಲ್ಲಿ ಗಿಜಿಗುಟ್ಟುವ ಹಕ್ಕಿಗಳನ್ನು ನೋಡುವುದು, ಮಳೆಗಾಲದಲ್ಲಿ ಒಂದೇ ಕೊಡೆಯಡಿ ಕೆಸರುನೀರಲ್ಲಿ ಆಡುತ್ತಾ ಬರುವುದು, ಆಚಾರ್ರ ಮನೆ ಬೇಲಿಯಲ್ಲಿ ಸೌತೆಮಿಡಿ ಲಪಟಾಯಿಸುವುದು... ಮಾವನ ಹತ್ತಿರ ಬೈಸಿಕೊಳ್ಳುವುದು! ಎಲ್ಲದರಲ್ಲೂ ಗೆಳತಿ, ಮಂದಾ. ಏಳನೇ ಕ್ಲಾಸಿಗೆ ಬರುವಾಗ ಇದ್ದಕ್ಕಿದ್ದಂತೆ ಸ್ವಲ್ಪ ಗಂಭೀರಳಾಗಿದ್ದಳು. ತಿಂಗಳಲ್ಲಿ ಮೂರುದಿನ ಮನೆಯಲ್ಲೂ ಬೇರೆ ತರಹ ಇರುತ್ತಿದ್ದಳು. ಕೇಳಿದರೆ 'ಅದೆಲ್ಲ ನಿಂಗ್ಯಾಕೆ?' ಅಂತ ಹಾರಿಸುತ್ತಿದ್ದಳು. ಶಾಲೆಯ ಸಮವಸ್ತ್ರ ಸ್ಕರ್ಟು-ಬ್ಲೌಸು ಬಿಟ್ಟರೆ ಮನೆಯಲ್ಲಿ ಸಲ್ವಾರು ಕಮೀಸಿನಲ್ಲಿರತೊಡಗಿದ್ದಳು.



ಹೈಸ್ಕೂಲು ಮೊದಲ ವರ್ಷದಲ್ಲಿದ್ದೆವು, ಮಾವ ಗದ್ದೆಯಲ್ಲಿ ಕಬ್ಬಿನಗಾಣ ಆಡಿಸುತ್ತಿದ್ದ. ಹೈಸ್ಕೂಲಿಂದ ಬಂದವರು ಮಾವನ ಸಹಾಯಕ್ಕೆ ಹೊರಟಿದ್ದರು. ಮಾವಿನತೋಪು ದಾಟಿ ಅತ್ತಿಮರದ ಹತ್ತಿರ ಗದ್ದೆಯ ತಗ್ಗಿಗಿಳಿಯುವಾಗ ಮಂದಾ ಬೇರಿಗೆ ಕಾಲು ತಾಗಿ ಮುಗ್ಗರಿಸಿದಳು. ಕೆಳಗಿದ್ದ ತಾನು ತಟ್ಟನೆ ಆತುಕೊಂಡರೂ ಅವಳ ಭಾರಕ್ಕೆ ಆಯತಪ್ಪಿ ಏನಾಯಿತೆಂದು ತಿಳಿಯಲಿಲ್ಲ. ಒಬ್ಬರನ್ನೊಬ್ಬರು ಆಧರಿಸಿ ಅಪ್ಪಿಕೊಂಡಿದ್ದೆವು. ತೆಕ್ಕೆಯಲ್ಲಿ ಮಂದಾ ಬೆಚ್ಚಗೆ ಮೆತ್ತಗನಿಸಿ ಮೈಯಲ್ಲಿ ಮುಳ್ಳೆದ್ದಿತ್ತು. ಮುಖ ಕೆಂಪಗೆ ಮಾಡಿಕೊಂಡಿದ್ದವಳು ನಡುಗುವ ದನಿಯಲ್ಲಿ 'ಬಿಡು... ಆಲೆಮನೆಗೆ ಹೊತ್ತಾತು' ಅಂದವಳು ಭರಭರನೆ ಹೆಜ್ಜೆ ಹಾಕಿದ್ದಳು. ಹಿಂದಿಂದ ಅವಳ ಜಡೆ, ಅವಯವಗಳೆಲ್ಲ ಒಂದು ಲಯದಲ್ಲಿ ಚಲಿಸುವುದು ಈಗಷ್ಟೇ ಅರಿವಿಗೆ ಬಂದು, ಏನೆಲ್ಲಾ ಮಾಯೆ ಯಾವಾಗ ಸೇರಿಕೊಳ್ತು ಇವಳಲ್ಲಿ ಅಂತ ಪರವಶನಾಗಿದ್ದ. ಆಲೆಮನೆಯಲ್ಲಿ ಹೇಳಿದ ಕೆಲಸಗಳನ್ನು ಮಾಡಲು ಪೈಪೋಟಿಗೆ ಬೀಳುವ ಇವರನ್ನು ಕಂಡು ಮಾವ ಹೊಗಳಿದ್ದ. ಆಮೇಲೆ ಒಬ್ಬರಿಗೊಬ್ಬರು ಹೇಳಿಕೊಳ್ಳದಿದ್ದರೂ ಸಹಜಮಾತು ಕಣ್ಣೋಟಗಳು ಹೃದಯದ ಸ್ಪಂದನವನ್ನು ಹೊತ್ತೇ ಚಲಿಸುತ್ತಿರುವುದು ಇಬ್ಬರಿಗೂ ಅರಿವಿತ್ತು. ಏನೋ ಹಾರಿಬಂದು ಅವನೆದೆಗೆ ತಾಕಿತು. ಬಸ್ಪಾಸು ಎಸೆದವಳ ಮುಖದಲ್ಲಿ ತುಂಟನಗುವಿತ್ತು. 'ಲ್ಯಾಪ್‌ಟಾಪಿನ ಕೆಲಸ ಕೊಟ್ಟಿದ್ದು